# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 931 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2023. |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಸ್ತೆ ಇಲ್ಲದೇ "ಲ್ಯಾಂಡ್ ಲಾಕ್" ಆಗಿರುವ ನಿವೇಶನ ಭೂಮಿ ಖರೀದಿಸುವ ಕುರಿತಾದ ಚಾಲ್ತಿ ಅಧಿಸೂಚನೆಯು ಕೇವಲ ನಗರ ಪಟ್ಟಣ ಪಾಲಿಕೆ ನಗರ ಸಭೆಗಳ ವ್ಯಾಪ್ತಿಯಲ್ಲಿ ಮಾತ್ರ ಸೀಮಿತವಾಗಿದ್ದು, ರಾಜ್ಯದ ಉಳಿದ ಭಾಗದ ಜನತೆ ಈ ಸೌಲಭ್ಯದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಸ್ತೆ ಇಲ್ಲದೇ "ಲ್ಯಾಂಡ್ ಲಾಕ್" ಆಗಿರುವ ನಿವೇಶನ ಭೂಮಿ ಖರೀದಿಸುವ ಕುರಿತಾದ ಚಾಲ್ತಿ ಅಧಿಸೂಚನೆಯು ಕೇವಲ ನಗರ ಪಟ್ಟಣ ಪಾಲಿಕೆ ನಗರ ಸಭೆಗಳ ವ್ಯಾಪ್ತಿಯಲ್ಲಿ ಮಾತ್ರ ಸೀಮಿತವಾಗಿದ್ದು, ರಾಜ್ಯದ ಉಳಿದ ಭಾಗದ ಜನತೆ ಈ ಸೌಲಭ್ಯದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ರಾಜ್ಯದ ಈ ಭಾಗಗಳ ಭೂಮಿಯ ಅಭಿವೃದ್ಧಿ ಕುಂಠಿತವಾಗುವುದು ಅಲ್ಲದೇ ಖರೀದಿಗೆ ಉತ್ಸುಕರಾಗಿದ್ದರೂ ಸಾಧ್ಯವಾಗದೇ ಸರ್ಕಾರದ ಆದಾಯಕ್ಕೂ ಹೊಡೆತ ಬೀಳುವುದರ ಬಗ್ಗೆ ಸರ್ಕಾರದ ನಿಲುವುಗಳೇನು; | ಗ್ರಾಮೀಣ ಪ್ರದೇಶದಲ್ಲಿ ಭೂ ಬಂಧಿತ 'ಬಿ' ಖರಾಬು ಜಮೀನುಗಳನ್ನು ಮಂಜೂರು ಮಾಡಲು ನಿಯಮಗಳಿಗೆ ತಿದ್ದುಪಡಿ ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | "ಲ್ಯಾಂಡ್ ಲಾಕ್" ಕಾಯ್ದೆಯನ್ನು ಹೋಬಳಿ ಗ್ರಾಮ ಪಂಚಾಯತ್ ವ್ಯಾಪ್ತಿಗೂ ವಿಸ್ತರಿಸುವ ನಿರ್ಧಾರವನ್ನು ಸರ್ಕಾರವು ಕೈಗೊಳ್ಳುವುದೇ; ಈ ಬಗ್ಗೆ ಸರ್ಕಾರ ಕೈಗೊಳ್ಳುವ ಯೋಜನೆಗಳ ಕುರಿತು ಅಂಕಿ ಅಂಶಗಳೊಂದಿಗೆ ವಿವರವಾದ ವರದಿ ನೀಡುವುದು; | |
| ಈ) | ಲ್ಯಾಂಡ್ ಲಾಕ್ ನಿಯಮಾನುಸಾರ ಭೂ ಖರೀದಿ ವಿವರಗಳನ್ನು ನೀಡುವುದು? | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 2ರ(14-ಎ)ರಲ್ಲಿ "ಭೂ ಬಂಧಿತ ಸರ್ಕಾರಿ ಭೂಮಿ" ಎಂದರೆ ಖಾಸಗಿ ವ್ಯಕ್ತಿ ಅಥವಾ ರಾಜ್ಯ ಸರ್ಕಾರದ ಇಲಾಖೆಗಳ ಅಥವಾ ಕೇಂದ್ರ ಸರ್ಕಾರದ ಇಲಾಖೆಗಳ ಅಥವಾ ಸ್ವಾಯತ್ತ ನಿಕಾಯಗಳ ಅಥವಾ ಶಾಸನಬದ್ಧ ಸಂಸ್ಥೆಗಳ ಮಾಲಿಕತ್ವದ ಭೂಮಿಯ ಗಡಿಯೊಳಗಿರುವ ರಸ್ತೆ ಮೂಲಕ ಅಥವಾ ಕಾಲು ಹಾದಿಯ ಮೂಲಕ ಅಥವಾ ಬಂಡಿ ಹಾದಿಯ ಮೂಲಕ ಸಾರ್ವಜನಿಕ ಪ್ರವೇಶವಿಲ್ಲದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗವಿಲ್ಲದ ಸರ್ಕಾರಿ ಭೂಮಿ ಎಂದು ಪರಿಭಾಷಿಸಲಾಗಿದೆ. |

ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 69-ಎ ರಲ್ಲಿ ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 22-ಎ(2) ರ ಪರಂತುಕದಲ್ಲಿ ಭೂ ಬಂಧಿತ ಸರ್ಕಾರಿ ಬಿ ಖರಾಬು ಜಮೀನುಗಳನ್ನು ಮಂಜೂರು ಮಾಡುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ.

“ನಗರ ಪ್ರದೇಶದಲ್ಲಿನ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗಳಿಂದ 18 ಕಿಲೋ ಮೀಟರ್ ಗಳವರೆಗಿನ, ಇತರ ನಗರ ಪಾಲಿಕೆಗಳ ವ್ಯಾಪ್ತಿಗಳಿಂದ 5 ಕಿಲೋ ಮೀಟರ್‌ಗಳವರೆಗಿನ ಭೂ ಬಂಧಿತ ಸರ್ಕಾರಿ ಖರಾಬು ಭೂಮಿಯನ್ನು 68ನೇ ಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಹಕ್ಕನ್ನು ಅಂತ್ಯಗೊಳಿಸುವಿಕೆಯ ತರುವಾಯ ಸರ್ಕಾರವು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಆದರೆ ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯಕ್ಕೆ ಕಡಿಮೆಯಿಲ್ಲದ ಅಂಥ ದರಗಳಲ್ಲಿ ವಿಲೇವಾರಿ ಮಾಡಬಹುದು”.

ಅದರಂತೆ, ಭೂ ಬಂಧಿತ ಸರ್ಕಾರಿ ಬಿ ಖರಾಬು ಜಮೀನುಗಳ ಪೈಕಿ lakes, streams, tanks and storm water drains ಗಳನ್ನು ಹೊರತುಪಡಿಸಿ, ಉಳಿದ ಭೂ ಬಂಧಿತ ಬಿ ಖರಾಬು ಜಮೀನುಗಳು ತನ್ನ ಮೂಲ ಗುಣಲಕ್ಷಣಗಳನ್ನು ಕಳೆದುಕೊಂಡು 10 ವರ್ಷಗಳಾಗಿದ್ದಲ್ಲಿ, ರಸ್ತೆಯ ಮೂಲಕ ಅಥವಾ ಕಾಲು ಹಾದಿಯ ಮೂಲಕ ಅಥವಾ ಬಂಡಿ ಹಾದಿಯ ಮೂಲಕ ಸಾರ್ವಜನಿಕ ಪ್ರವೇಶವಿಲ್ಲದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗವಿಲ್ಲದ ಭೂ ಬಂಧಿತ ಸರ್ಕಾರಿ ಬಿ ಖರಾಬು ಜಮೀನುಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 68ರಡಿಯಲ್ಲಿ ಪ್ರಕ್ರಿಯೆ ನಡೆಸಿ, ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಿದ ನಂತರ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 22-ಎ (1)(i)(7) ರನ್ವಯ ಮೌಲ್ಯವನ್ನು ವಿಧಿಸಿ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.

| | | |
|---|---|---|
| | | ಭೂ ಬಂಧಿತ ಸರ್ಕಾರಿ ಬಿ ಖರಾಬು ಜಮೀನುಗಳನ್ನು ಮಂಜೂರು ಮಾಡುವಾಗ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22-ಎ(1)(i)(7) ರನ್ವಯ ಈ ಕೆಳಕಂಡಂತೆ ಮೌಲ್ಯವನ್ನು ವಿಧಿಸಲು ಅವಕಾಶ ಕಲ್ಪಿಸಲಾಗಿದೆ. |

| | |
|---|---|
| Landlocked Government Lands which have lost their original characteristics ten years ago excluding lakes, streams, tanks and storm water drains. | (i) The rate for kharab land falling within the agriculture land shall be fixed at the guidance value of the surrounding agricultural land.<br>(ii) The rate for the kharab land falling within the diverted land shall be fixed at the guidance value of the surrounding lands for which the diversion has been made.<br>(iii) The rate for the kharab land falling within the developed land will be fixed at the guidance value in square meter of the surrounding developed land approved by the competent authority. |

ಸಂಖ್ಯೆ: ಆರ್‌ಡಿ 145 ಎಲ್‌ಜಿಕ್ಯೂ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು